Reg No. B G 158 22-3-1969

52 nd Year of Publication

SATYAVADI Daily, MYSORE 4

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದೇಶದಲ್ಲಿ 45 ಸಾವಿರಕ್ಕೆ ಮೀರಿ ನಿರುದ್ಯೋಗಿ ಇಂಜಿನೀಯರು!

ಮೈಸೂರು-ನಜರಬಾದು ರಾಣಾ ಪ್ಯಾಲೇಸ್ ಆವರಣದಲ್ಲಿ ಹಾಕಿರುವ
— ನಮ್ಮ ಸ್ವಂತ ಥಿಯೇಟರ್‌ನಲ್ಲಿ —
11-3-69 ರಿಂದ ಪ್ರಾರಂಭ – ಪ್ರತಿದಿನ ಸಂಜೆ 6-30 ರಿಂದ 12-30 ರವರೆಗೆ
ವಿವಿಧ ವಿನೋದಾವಳಿಗಳು
ಮಲಬಾರಿನ ನುರಿತ ಸರ್ಕಸ್‌ನವರಿಂದ ಸರ್ಕಸ್
ಎಲ್. ವಿ. ಬಾಬುರವರ ಮ್ಯಾಜಿಕ್ — ಆಂಧ್ರದ ನರ್ತಕಿಯರಿಂದ ನರ್ತನ
ಪ್ರವೇಶ ಧನ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ.ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಪ್ತಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂತೆ ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಫುಟ್‌ಬಾಲ್ ಆಟಗಾರನಿಗೆ ಶಿಕ್ಷೆ

ವಿಯನ್ನ— ಮೆಕ್ಸಿಕೋಡಲ್ಲಿನ ಕ್ರೀಡೆಗಳಿಗೆ ಎರಡು ದಿನಗಳ ಮುಂಚೆ ತನ್ನ ತಂಡವನ್ನು ತ್ಯಜಿಸಿದ ಹೆಂಗೇರಿ ಒಲಂಪಿಕ್ ಫುಟ್‌ಬಾಲ್ ಆಟಗಾರ ಜೋಲ್ಟ್ ಏರ್ಗರ ಸಂಬಂಧವ ವಿಚಾರಣೆ ಅವರ ಗೈರ್ ಹಾಜರಿನಲ್ಲಿ ನಡೆದು, ಅವರು ಹೆಂಗೇರಿಗೆ ವಾಪಸ್ಸು ಬರಲು ತಿರಸ್ಕರಿಸಿದ್ದಕ್ಕೆ 5 ವರ್ಷ ಸಜೆ ವಿಧಿಸಲಾಯಿತು — ಅವರೊಡನೆ ವಿದೇಶದಲ್ಲಿರುವ ಅವರ ಪತ್ನಿಗೆ ಎರಡೂವರೆ ವರ್ಷ ಸಜಾ ವಿಧಿಸಲಾಯಿತು – ಆತನ ಎಲ್ಲಾ ಆಸ್ತಿಯನ್ನೂ ಮುಟ್ಟುಗೋಲು ಕೋರ್ಟು ಆಜ್ಞೆಯಾಯಿತು.

★

ನೀರಿನ ವ್ಯಾಜ್ಯ

ಹೈದರಾಬಾದು— ಡೆಲ್ಲಿಯಲ್ಲಿ ತಾ॥ 28 ರಂದು ನೀರಿನ ವ್ಯಾಜ್ಯ ಬಗ್ಗೆ ಮುತ್ತೊಂದು ಸುತ್ತು ಮಾತುಕತೆ ನಡೆಯಲಿದೆ

●

ಪಾಕಿಸ್ತಾನಕ್ಕೆ ಹೋದರು

ನವದೆಹಲಿ— 1950 ರಿಂದ 67 ರವರೆಗೆ ಅಲಿಘಡದ ವಿಶ್ವವಿದ್ಯಾಲಯದ 184 ಇಂಜನೀಯರು ಪಾಕಿಸ್ತಾನಕ್ಕೆ ವಲಸೆ ಹೋದರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಹೋಲಾಪುರದಲ್ಲಿ ಪುನಾರಂಭ

ಹೋಲಾಪುರ— ರೂ. 2 ಕೋಟಿಯ ಸಿದ್ದೇಶ್ವರ ಮಾರುಕಟ್ಟೆಯ ಶಂಕುಸ್ಥಾಪನೆ ಮಾಡುತ್ತಾ, ಮುಖ್ಯ ಮಂತ್ರಿ ನಾಯಿಕರು, ಗಡಿ ಸಮಸ್ಯೆ ಬೀದಿಯಲ್ಲಿ ಹೊಡೆದಾಡತಕ್ಕದ್ದಲ್ಲವೆಂದೂ, ನ್ಯಾಯವಾಗಿ ಪೈಸನ್ಮುವಿಲ್ಲದೆ, ತೊಡಕಿಲ್ಲದೆ ಪರಿಹರಿಸಿಕೊಳ್ಳಬೇಕೆಂದೂ ಹೇಳಿದರು – ನೆರೆ ರಾಜ್ಯ ಮೈಸೂರು ನಮಗೆ ಸೋದರನಂತಿದ್ದು ಮೈಸೂರಿನವರ್ನಿಡನೆ ಗಡಿ ಮತ್ತು ನೀರಿನ ವ್ಯಾಜ್ಯವಿದ್ದರೂ, ಆನರ ಮನ ನೋಯುವಂತೆ ವರ್ತಿಸುತ್ತಿಲ್ಲವೆಂದರು – ಹೋಲಾಪುರವು ಮಹಾರಾಷ್ಟ್ರ, ಮೈಸೂರು, ಆಂಧ್ರದ ಗಡಿಯಲ್ಲಿದ್ದು, ಮಾದರಿ ನಗರವಾಗಿ, ಭಾವೈಕ್ಯ ಗುರುತಾಗಿದೆ. ಎಂದರು.

●

ಮಂತ್ರಿಗಳ ಹಿತಬೋಧೆ

ನೆಲಮಂಗಲ— ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಓದುವದರಲ್ಲಿ ಶ್ರದ್ಧೆಯೂ ಇರಬೇಕೆಂದು ಅರಣ್ಯಶಾಖಾ ಮಂತ್ರಿ ಶ್ರೀ ಆಲೂರು ಹನುಮಂತಪ್ಪನವರು ಮಿಡಲ್ ಸ್ಕೂಲು ದಿನೋತ್ಸವದಲ್ಲಿ ತಿಳಿಸಿದರು.

★

ಪಂಚವಹಾರಥೋತ್ಸವ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯ ಪಂಚವಹಾರಥೋತ್ಸವವು ತಾ 20 ರಂದು ನಡೆಯಲಿದೆ – ಒಂದು ಲಕ್ಷ ಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ.

★

ಡೆಪ್ಯೂಟಿ ಸ್ಪೀಕರ್ ವಿಪ್

ನವದೆಹಲಿ— ಸರ್ಕಾರಿ ಹಣದಿಂದ ಡೆಪ್ಯೂಟಿ ಸ್ಪೀಕರ್ ವಿಪ್‌ಗಳಿಗೆ ಸಂಬಳ ಕೊಡುವದನ್ನು ನಿಲ್ಲಿಸಬೇಕೆಂಬ ವಿರೋಧಿಗಳ ಕೋರಿಕೆಯು ಲೋಕಸಭೆಯಲ್ಲಿ 63-28 ವೋಟುಗಳಿಂದ ಬಿದ್ದುಹೋಯಿತು.

ಮುಖ್ಯಮಂತ್ರಿಗಳು ಶ್ರೀಶೈಲಕ್ಕೆ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಾ॥ 29 ರಂದು ಶ್ರೀಶೈಲಕ್ಕೆ ಪ್ರಯಾಣಮಾಡಿ, ಅಲ್ಲಿ ತಾ॥ 30 ರಂದು ಮೈಸೂರು ಸರಕಾರದ ಛತ್ರದ ಶಂಕುಸ್ಥಾಪನೆ ಮಾಡುವರು.

★

ಕೃಷ್ಣಾ ನುಲ್ದಂಡೆ

ಬೆಂಗಳೂರು— ಕೃಷ್ಣ ಮೇಲ್ದಂಡೆ ಪ್ರಾಜೆಕ್ಟನ್ನು ಮೈಸೂರೇ ಕೈಗೊಳ್ಳಬೇಕಾಗಿದೆ, ಪ್ಲಾನಿಂಗ್ ಕಮಿಷನ್ ಅದನ್ನು ರಾಷ್ಟ್ರೀಯ ಪ್ರಾಜೆಕ್ಟಾಗಿ ಕೈಗೊಳ್ಳದಿದೆ, ಅದಕ್ಕೆ ಖರ್ಚು ರೂ. 100 ಕೋಟಿ ಮೀರಿರುವದರಿಂದ ಮೈಸೂರು ಕೇಂದ್ರದ ನೆರವ ಕೇಳುತ್ತಿದೆ, ಆದರೆ ಪ್ರೋತ್ಸಾಹದಾಯಕ ಉತ್ತರವಿಲ್ಲ ಎಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ನಿರುದ್ಯೋಗಿ ಇಂಜನಿಯರರು

ನವದೆಹಲಿ— ದೇಶದಲ್ಲಿ 45000 ನಿರುದ್ಯೋಗಿ ಇಂಜನಿಯರಿಗೂ ಡಿಪ್ಲೊಮಾ ಹೋಲ್ಡರರೂ ಇರುವರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಕಾಮನ್ವೆಲ್ತ್ ಬಿಡಿ

ನವದೆಹಲಿ— ಆಂಗ್ಲೋಲಾದ ಕಾರೀಬ್ಬಿದ್ವೀಪವನ್ನು ಬ್ರಿಟಿಷ್ ಸೇನೆ ಆಕ್ರಮಿಸಿದ್ದಕ್ಕೆ ಲೋಕಸಭೆಯಲ್ಲಿ ಚಿಂತೆ ಉಂಟಾಗಿ ಭಾರತವು ಕಾಮನ್ವೆಲ್ತ್ ಬಿಡಬೇಕೆಂದು ಸದಸ್ಯರೊಬ್ಬರು ಹೇಳಿದರು.

★

ಬೆಂಗಳೂರು— ರಾಜ್ಯಕ್ಕೆ ಸೀಮೆಎಣ್ಣೆ ಕೋಟಾವನ್ನು ತಿಂಗಳಿಗೆ 12500 ಟನ್ನಿಂದ 14000 ಟನ್‌ಗಳಿಗೆ ಹೆಚ್ಚಿಸಲು ಮೈಸೂರು ಸರಕಾರ ವಿನಂತಿಸಿರುವುದಾಗಿ ಆಹಾರಮಂತ್ರಿ ಶ್ರೀ ವಿಠಲ್‌ದಾಸ್ ಶೆಟ್ಟಿರು ಶಾಸನಸಭೆಯಲ್ಲಿ ತಿಳಿಸಿದರು.

ನಿಧನರಾದ ಪಾರ್ಲಿಮೆಂಟು ಸದಸ್ಯರು

ನವದೆಹಲಿ— ನಿಧನರಾದ ಪಾರ್ಲಿಮೆಂಟು ಸದಸ್ಯರ ದೇಹವನ್ನು ಅವರ ಸ್ನೇಹಿತರುಗಳಿಗೆ ಕಳುಹಿಸಲಾಗುವುದೆಂದು ಸದಸ್ಯರಿಗೆ ಸರ್ಕ್ಯುಲರ್ ಕಳುಹಿಸಲಾಗಿದೆ.

ದೇಶಾದ್ಯಂತ ಚಳವಳಿ

ಮಹಾರಾಷ್ಟ್ರದಲ್ಲಿ ಬೌದ್ಧರಿಗೆ ದೊರೆತಿರುವ ರಿಯಾಯಿತಿಯಂತೆ ದೇಶಾದ್ಯಂತ ದೊರೆಯಲು ರಿಪಬ್ಲಿಕ್ ಪಾರ್ಟಿ ಏಪ್ರಿಲ್ 14 ರಿಂದ ಸತ್ಯಾಗ್ರಹ ಹೂಡಲು ನಿರ್ಧರಿಸಿದೆ.

ವಚನಭಾಗವತದ ಪ್ರಕಾಶನ ಮಹೋತ್ಸವ

ಮೈಸೂರು— ಶ್ರೀ ವರಲಕ್ಷ್ಮೀ ಅಕ್ಕೆಡಮಿಯಾಸ್ ಆಫ್ ಫೈನ್ ಆರ್ಟ್ಸ್‌ರವರು ವಚನಭಾಗವತದ ಪ್ರಕಾಶನಾ ಮಹೋತ್ಸವವನ್ನು ತಾ|| 29-3-69 ಸಂಜೆ 6 ಗಂಟೆಗೆ ಚಾಮರಾಜ ಡಬ್ಬಲ್ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನೆರವೇರಿಸುವರು.

ಸೌಂದರ್ಯ ಪ್ರೇಮಿಗಳ ಸಂಘ

ಬೆಂಗಳೂರು— ಕುಮಾರ ಪಾರ್ಕ್ ವೆಸ್ಟ್‌ನಲ್ಲಿರುವ ರಾಜ್ ಇಂಡಸ್ಟ್ರೀಸ್ ಆಫೀಸಿನಲ್ಲಿರುವ ಸೌಂದರ್ಯ ಪ್ರೇಮಿಗಳ ಸಂಘಕ್ಕೆ ಶ್ರೀ ಕೆ. ಮೋಹನದೇವ್ ಅಳ್ವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಸ್ ಗೋವಿಂದರಾಜ್ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುವರು.



Protect the Cow

SHAKTI
SUDHA

A Superb Tonic

ಅಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳನ್ನು ಸಿಗುವ ಸ್ಥಳ

ವುಡ್‌ಲ್ಯಾಂಡ್ಸ್ 21-3-69 ರಿಂದ

ಅಮೋಘ ಆರಂಭ

— ಚಿತ್ತಾಕರ್ಷಕ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ —

ಮೇರೆ ಹುಜೂರ್

ಪಾತ್ರ— ಮಾಲಾಸಿನ್ಹಾ, ರಾಜಕುಮಾರ್, ಜಿತೇಂದ್ರ, ಜಾನೀವಾಕರ್

ಸಂಗೀತ : ಶಂಕರ್ ಜೈಕಿಷನ್

[ದಿನ 3 ಪ್ರದರ್ಶನಗಳು]

ಆಪೆರಾ— 19-3-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಪರಾಶಕ್ತಿ

ಪಾತ್ರ : ಶಿವಾಜಿ ಗಣೇಶ್ ಪಂಡರಿಬಾಯಿ, ರಾಜೇಂದ್ರನ್

..... ದಿನವಹಿ 3 ಆಟಗಳು ....

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimhaiyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4